**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.227/2022

**PW**. 7

**CW**. 8

**ಸಾಕ್ಷಿಯ ಹೆಸರು –ಬಿ ಜೆ ದೇವರಾಜು**

**ತಂದೆಯ ಹೆಸರು –ಜವರೇಗೌಡ**

**ವಯಸ್ಸು –53 ವರ್ಷಗಳು**

ದಿನಾಂಕ 02–08–2024 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ವ್ಯವಸಾಯ**

**ವಾಸಸ್ಥಳ –ಬೆಟ್ಟದಪುರ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಆರೋಪಿ ನನ್ನ ತಂಗಿ ಮಗಳು. ಈಗ್ಗೆ 4 ವರ್ಷಗಳ ಹಿಂದೆ ಚಾಸಾ–4 ಮೃತ ರವಿಕುಮಾರ ಜೊತೆ ಆರೋಪಿತಳ ಮದುವೆ ನಿಶ್ಚಯವಾಗಿತ್ತು. ಅವರ ವಿವಾಹ ನೆರವರಲಿಲ್ಲ. ಆರೋಪಿಯ ಜೊತೆ ಮದುವೆ ಮುರಿದು 2 ವರ್ಷಗಳ ನಂತರ ರವಿಕುಮಾರ ಅನಾರೋಗ್ಯದಿಂದ ತೀರಿಕೊಂಡಿರುತ್ತಾನೆ. ಚಾಸಾ–4 ರಿಂದ 7 ರವರು ನಮ್ಮ ಊರಿನವರು. ಚಾಸಾ–2 ರವರಿಗೆ ಗಾಯ ಆಗಿ ಬಿದಿದ್ದನ್ನು ನಾನು ನೋಡಿಲ್ಲ. ಅವನನ್ನು ಆಸ್ಪತ್ರೆಗೆ ಸೇರಿಸಿಲ್ಲ. ಚಾಸಾ–9 ನನ್ನ ತಂದೆ ಪಾಶ್ವಾವಾಯುಯಿಂದ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದು , ಓಡಾಡುವ ಸ್ಥಿತಿಯಲಿಲ್ಲ.

(**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೇಳಿದ್ದು ಸಾಕ್ಷಿಯ ಸಾಕ್ಷ್ಯ ಮತ್ತು ಇತರೆ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು**.)

**ಪಾಟೀಸವಾಲುಃ– ಸರ್ಕಾರಿ ಅಭಿಯೋಜಕರಿಂದಃ–**

ಸ್ಥಳದಲ್ಲಿ ಬಿದ್ದಿದ್ದ ಚಾಸಾ 2 ರವರನ್ನು ನೋಡಿದಾಗ ಎಲ್ಲಿ ರಕ್ತಗಾಯವಾಗಿತ್ತು, ಯಾವ ಭಾಗದಲ್ಲಿ ರಕ್ತಗಾಯವಾಗಿತ್ತು ಎಂದು ನಾನು ನೋಡಲಿಲ್ಲ. ನಮ್ಮ ಮನೆಯ ಪಕ್ಕದಲ್ಲಿ ಚಾಸಾ 5 ಮತ್ತು 7 ರವರ ಮನೆ ಇದೆ ಎಂದರೆ ಸರಿ. ಚಾಸಾ 8, ಆರೋಪಿಯ ಸೋದರ ಮಾವನಾಗಿದ್ದು, ಆತನು ನಮ್ಮ ಊರಿನವನು ಎಂದರೆ ಸರಿ. ನಾನು ಕೂಗಿಕೊಂಡ ನಂತರ ಚಾಸಾ 5, 7 ಹಾಗೂ 8 ರವರು ಸ್ಥಳಕ್ಕೆ ಬಂದರು ಎಂದರೆ ಸರಿ. ಕೃಷಿ ಇಲಾಖೆ ಕಛೇರಿ ಕಟ್ಟಡದ ವಿದ್ಯುತ್ ಸಂಪರ್ಕ ಮತ್ತು ಬೀದಿ ದೀಪದ ಸಂಪರ್ಕ್ ಸ್ಥಳದಲ್ಲಿ ಇತ್ತು ಎಂದರೆ ಸರಿಯಲ್ಲ. ನಾನು ಸಹ ಆ ದಿನ ಚಾಸಾ 2 ರವರನ್ನು ಆಸ್ಪತ್ರೆಗೆ ದಾಖಲಿಸಲು ಹೋಗಿದ್ದೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಚಾಸಾ 2 ರವರಿಗೆ ಸೇರಿದ ಜರ್ಕಿನ್ ಸಹ ಬಿದ್ದಿತ್ತು ಎಂದರೆ ಸರಿಯಲ್ಲ. ಮು.ಮಾ. 4 ಮತ್ತು 5 ಗಳನ್ನು ಹಾಗೂ ನಿ.ಪಿ. 4 ರಲ್ಲಿ ಕಂಡ ಮೋಟರ ಸೈಕಲ್ ಅನ್ನು ನಾನು ನಮ್ಮ ಮನೆಯಲ್ಲಿ ಇಟ್ಟುಕೊಂಡಿದ್ದೆ ಎಂದರೆ ಸರಿಯಲ್ಲ. ಅವುಗಳೇ ಈ ದಿನ ನ್ಯಾಯಾಲಯದ ಮುಂದಿರುವ ವಸ್ತುಗಳು ಎಂದರೆ ಮೂ. ಮಾ 4, 5 ಹಾಗೂ ನಿ.ಪಿ. 4 ಛಾಯಾಚಿತ್ರಗಳಾಗಿರುತ್ತವೆ ಎಂದರೆ ಸರಿಯಲ್ಲ. ಚಾಸಾ 2 ರವರಿಗೆ ಸ್ಥಳದಲ್ಲಿ ಪ್ರಜ್ಞೆ ಇರಲಿಲ್ಲ. ಚಾಸಾ 2 ರವರನ್ನು ಆರೋಪಿ ವಿವಾಹವಾಗಲು ಇಷ್ಟವಿಲ್ಲದ ಕಾರಣ ಆ ದಿನ ಚಾಸಾ 2 ರವರನ್ನು ಆ ಸ್ಥಳಕ್ಕೆ ಕರೆಯಿಸಿ ಆರೋಪಿ ಚಾಸಾ 2 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಚಾಕುವಿನಿಂದ ಹೊಟ್ಟೆಯ ಮತ್ತು ಪಕ್ಕೆಯ ಭಾಗಕ್ಕೆ ಹಲ್ಲೆ ಮಾಡಿದ್ದಾಳೆಂದು ತಿಳಿದುಬಂತು ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗುವಷ್ಟರಲ್ಲಿ ಆರೋಪಿ ಸ್ಥಳದಿಂದ ಪರಾರಿಯಾಗಿದ್ದಾಳೆ ಎಂದು ಚಾಸಾ 2 ನನಗೆ ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. ಆ ಬಗ್ಗೆ ನನಗೆ ಈಗ ಓದಿ ಹೇಳಿದಂತೆ ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ. 15 ಎಂದು

ಗುರುತಿಸಲಾಯಿತು. ಆರೋಪಿಯು ನನ್ನ ಸಂಬಂಧಿಯಾದ ಕಾರಣ ಅವರ ವಿವಾಹ ನಿಶ್ಚಯ ಮತ್ತು ಚಾಸಾ 2 ರವರೊಂದಿಗೆ ವಿವಾಹ ನಿಗದಿಯಾಗಿದ್ದ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ– ಆರೋಪಿ ಪರ ಶ್ರೀ ಎಸ್. ಪಿ ವಕೀಲರಿಂದಃ–**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.